(ಶ್ರೀ ಟಿ. ಚನ್ನಯ್ಯ)

ಯಲ್ಲಿದೆ. ನಿಮ್ಮ ಪ್ರಶ್ನೆಯಲ್ಲಿ ಕೇಳಿರುವ ನಾಲ್ಕು ಗ್ರಾಮಗಳಲ್ಲಿಯೂ ಕೂಡ ಅನ್ಸತ್ರೆಗಳನ್ನು ಆರೋಗ್ಯ ಕೇಂದ್ರಗಳಾಗಿ ಪರಿವರ್ತನೆ ಮಾಡಬೇಕೆಂಬ ಪ್ರಶ್ನೆಯನ್ನೂ ಕೂಡ ಈ ಮಾನ್ಸರ್ ಪ್ಲಾನ್‌ನಲ್ಲಿ ಸೇರಿಸಿ ಕಳುಹಿಸಿದ್ದಾರೆ. ಆದರ ವಿಷಯಲ್ಲಿ ಶೀಘ್ರವಾಗಿ ತೀರ್ಮಾನ ತೆಗೆದುಕೊಳ್ಳುತ್ತೇನೆ.

ಶ್ರೀ ವಿ. ಮಸಿಯಪ್ಪ.—ಇವು ಮಲೇರಿಯಾ ಪ್ರದೇಶಗಳಾಗಿರುವುದರಿಂದ ಸರ್ಕಾರದವರು ತೀರ್ಮಾನ ತೆಗೆದುಕೊಳ್ಳುವವರೆಗೂ interim arrangement ಎಂದರೆ ಮಲೇರಿಯಾ ನಿರೋಧ ಮಾಡಲು ತೀವ್ರವಾದ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಡಿ. ಡಿ. ಟಿ. ಸ್ಪ್ರೇ ಮಾಡಲು ಏರ್ಪಾಡು ಮಾಡಿದ್ದೇವೆ. ಇನ್ನೂ ಅವಶ್ಯಕತ ಇದ್ದರೆ ಎಲ್ಲೆಲ್ಲಿ ಮಲೇರಿಯಾ ಹಾವಳಿ ಹೆಚ್ಚಾಗಿದೆ ಎಂದು ತಿಳಿಸಿದರೆ ಅಂಥ ಸ್ಥಳಗಳಲ್ಲಿ ಕೂಡ ಡಿ. ಡಿ. ಟಿ. ಸ್ಪ್ರೇ ಮಾಡಲು ಏರ್ಪಾಡು ಮಾಡುತ್ತೇವೆ.

Well for Harijans of Dalavaihalli, Y. N. Hoskote Hobli, Pavagada Taluk.

Q.—95. Sri C. T. HANUMANTHAIYA (Pavagada—Scheduled Castes).—

Will the Government be pleased to state :—

(*a*) when did the Harijans of Dalavaihalli, Y. N. Haskote Hobli, Pavagada Taluk, give application requesting to get their drinking water well repaired ;

(*b*) whether an estimate has been prepared ;

(*c*) if not, the reason for not preparing the estimate so far ?

A.—Sri T. CHANNIAH (Minister for Public Health and Local Self-Government).—

(*a*) On 14th April 1955.

(*b*) Yes.

(*c*) Does not arise.

ಶ್ರೀ ಸಿ. ಟಿ. ಹನುಮಂತಯ್ಯ.—ಪಾವಗಡ ತಾಲ್ಲೂಕು ವೈ. ಎಸ್. ಹೊಸಕೋಟೆ ಹೋಬಳಿ ದಳವಾಯಿ ಹಳ್ಳಿಯಲ್ಲಿ ಇರುವ ಹರಿಜನರ ಭಾವಿ ಶಿಥಿಲವಾಗಿ ಎಷ್ಟು ವರ್ಷಗಳಾದುವು ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಶಿಥಿಲವಾಗಿ ಎಷ್ಟು ವರ್ಷಗಳಾದುವು ಎಂದು ಹೇಳುವುದಕ್ಕೆ ಈಗ ಸಾಧ್ಯವಿಲ್ಲ. ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರು 12-2-1955ರಲ್ಲಿ ಎಸ್ಟಿಮೇಟನ್ನು ಡೆಪ್ಯುಟಿ ಕಮಿಷನರ ಸ್ಯಾಂಕ್ಷನಿಗೆ ಕಳುಹಿಸಿದ್ದಾರೆ.

ಶ್ರೀ ಸಿ. ಟಿ ಹನುಮಂತಯ್ಯ.—ಎಸ್ಟಿಮೇಟು ಎಷ್ಟಾಗಿದೆ ?

ಶ್ರೀ ಟಿ. ಚನ್ನಯ್ಯ.—700 ರೂಪಾಯಿಗಳು.

ಶ್ರೀ ಟಿ. ಹನುಮಂತಯ್ಯ.—ಈ ಭಾವಿಯನ್ನು ರಿಪೇರಿ ಮಾಡುವುದಕ್ಕೆ ಈಗ ಅಂದಾಜು ಮಾಡಿರುವ ಹಣ ಸಾಕಾಗುತ್ತದೆಯೇ ?

ಅಧ್ಯಕ್ಷರು.—ಎಷ್ಟು ಬೇಕೋ ಅಷ್ಟನ್ನು ಮಾಡಿದ್ದಾರೆ ; ಹೆಚ್ಚಾಗಿ ಬೇಕಾದರೆ ಮತ್ತೆ ಮಾಡುತ್ತಾರೆ.

ಶ್ರೀ ಬಿ. ಟಿ. ಕೆಂಪರಾಜ್.—ಭಾವಿಗಳಿಗೆ ಅಂದಾಜು ಮಾಡುವವರು P. W. D. ಇಲಾಖೆಯವರೇ ?

ಶ್ರೀ ಟಿ. ಚನ್ನಯ್ಯ.—ಹೌದು. ಪಂಚಾಯತಿ ನಬ್-ಓವರ್‌ಸಿಯರ್‌ಗಳು ಗ್ರಾಮಾಂತರ ಪ್ರದೇಶಗಳಿಗೆ ಅಂದಾಜು ಮಾಡುತ್ತಾರೆ.

Protected water supply for villages in Kolar District.

Q.—373. Sri G. NARAYANA GOWDA (Mulbagal—Srinivasapur).—

Will the Government be pleased to state :—

the names of villages in Kolar District to which protected water supply is sanctioned (information to be furnished talukwise) ?

A.—Sri T. CHANNIAH (Minister for Public Health and Local Self-Govevernment).—

Sl. No.	*Name of village*	*Taluk*
1.	Narasapur ...	Kolar
2.	Vokkaleri ...	Do
3.	Kyalanur ...	Do
4.	Pate Channarahalli ...	Do
5.	Shillangere ...	Do
6.	Vemagal ...	Do
7.	Nangly ...	Mulbagal
8.	Tayloor ...	Do
9.	Avani ...	Do
10.	Devarayasamudra ...	Do
11.	Gattikamadeva ...	Bangarpet
12.	Shivanpatna and Hongenahalli ...	Malur
13.	Chikka Tirupathi ...	Do
14.	Masti ...	Do
15.	Nambyhalli ...	Srinivasapur
16.	Nandi ...	Chikballapur.
17.	Kaivara ...	Chintamani
18.	Bhaktrahalli ...	Sidlaghatta
19.	Melur ...	Do
20.	Jangamakote ...	Do

Sl. No.	*Name of village*	*Taluk*
21.	Thondebhavi ...	Gauribidanur
22.	Hudugur ...	Do
23.	Hosur ...	Do
24.	Darinayakanapalya	Do

ಶ್ರೀ ಜಿ. ನಾರಾಯಣಗೌಡ.—ಶ್ರೀನಿವಾಸಪುರ ತಾಲ್ಲೂಕು ಯಲ್ಲೂರು ಗ್ರಾಮಕ್ಕೆ protected water supply ಮಾಡುವುದಕ್ಕೆ ಒಂದು ಅಂದಾಜು ತಯಾರು ಆಗಿರಲಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಅಂದಾಜು ಆಗಿತ್ತೋ ಇಲ್ಲವೋ ಎನ್ನುವ ಸಮಾಚಾರ ನನ್ನ ಬಳಿಯಲ್ಲಿಲ್ಲ.

ಶ್ರೀ ಜಿ. ನಾರಾಯಣಗೌಡ.—ಇದನ್ನು ಪುನಃ ಪರಿಶೀಲಿಸುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಈಗಾಗಲೇ ಕೋಲಾರ ಜಿಲ್ಲೆಯ 24 ಗ್ರಾಮಗಳಿಗೆ ಮಂಜೂರಾಗಿದೆ. ಆದರೆ ಈಗ ತಾವು ಬೇಕು ಎಂದರೆ, ಮುಂದೆ ಅದಕ್ಕೆ ಒಂದು ಅಂದಾಜನ್ನು ತರಿಸಿಕೊಂಡು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಜಿ. ನಾರಾಯಣಗೌಡ.—ಹಳ್ಳಿಗಳಿಗೆ protected water supply ಕೊಡುವ ಸಂಬಂಧದಲ್ಲಿ ಪಂಚಾಯಿತಿಯವರು ಏನಾದರೂ quota ಕೊಡಬೇಕು ಎಂದು ನಿಗದಿ ಮಾಡಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಹೌದು, ಅವರು ಸ್ವಲ್ಪ ಭಾಗ ಕೊಡಬೇಕು ಎಂದು ನಿರೀಕ್ಷಿಸಲಾಗಿದೆ.

ಶ್ರೀ ಜಿ. ನಾರಾಯಣಗೌಡ.—ವಾಲಂಟರಿ ಕಂಟ್ರಿಬ್ಯೂಷನ್ ಕೊಡಬೇಕೇ ಅಥವಾ ನಗದು ಕಂಟ್ರಿಬ್ಯೂಷನ್ ಕೊಡಬೇಕೇ ?

ಶ್ರೀ ಟಿ. ಚನ್ನಯ್ಯ.—ನಗದು ಕೊಡಬಹುದು. ಇಲ್ಲದಿದ್ದರೆ contribution of labour ಕೊಡಬೇಕು.

ಶ್ರೀ ಜಿ. ನಾರಾಯಣಗೌಡ.—ಪಟ್ಟಣಗಳಿಗೆ ತಾವು ನೀರು ಸರಬರಾಜು ಮಾಡುವಾಗ ಲಕ್ಷಾಂತರ ರೂಪಾಯಿಗಳ ಗ್ಯಾರಂಟಿ ಕೊಡುವುದನ್ನು ಗಮನದಲ್ಲಿಟ್ಟುಕೊಂಡು, ಹಳ್ಳಿಗಳಿಗೆ ನೀರು ಸರಬರಾಜು ಮಾಡುವಾಗಲೂ ಅದೇ ರೀತಿ ಕೊಡುವುದು ಒಳ್ಳೆಯದು ಅಲ್ಲವೆ?

ಶ್ರೀ ಟಿ. ಚನ್ನಯ್ಯ.—ಈಗ ಹಳ್ಳಿಗಳಲ್ಲಿ ಭಾವಿ ತೆಗೆಯುವಾಗ ಉಚಿತವಾಗಿ ಕೊಡುತ್ತೇವೆ. National Water Supply Scheme ನಲ್ಲಿ ಮಾತ್ರ ಈರೀತಿ ಇದೆ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಮಾಲೂರು ತಾಲ್ಲೂಕು ಲಕ್ಕೂರಿಗೆ protected water supply ಕೊಡಬೇಕು ಎಂದು ಅಂದಾಜಾಗಿ ತಮಗೆ ಬಂದಿತ್ತಲ್ಲವೆ?

ಶ್ರೀ ಟಿ. ಚನ್ನಯ್ಯ.—ಆ ವಿವರಗಳನ್ನೆಲ್ಲ ಈಗ ನಾನು ಹೇಳಲಾರೆ.

Sri H. C. LINGA REDDY.—May I know the reason why in some taluks six places have been selected and in other taluks only one place is selected for locating the scheme of protected water supply ?

Sri T. CHANNIAH.—That depends on the availability of electricity and the factor of population ranging from 1,000 to 5,000 and also availability of pure drinking water. Where the water that is available leads to contagion, we do not start the scheme there.

Sri H. C. LINGA REDDY.—Will the Government consider that it is very essential to locate this scheme in Lokkur because there is electricity and other facilities are also available ?

Sri T. CHANNIAH.—But it is too late to make such a representation now. The Hon'ble Member should have suggested this when water supply schemes were drawn up for Kolar District. The schemes in respect of that district have been approved by the Government of India. The request of the Hon'ble Member will however be considered and action taken to get up a scheme in consultation with all concerned.

ಶ್ರೀ ಕೆ. ಲಕ್ಕಪ್ಪ.—ಹಳ್ಳಿಯವರು ತಮ್ಮ quota ಕೊಡುವುದಕ್ಕೆ ಸಾಧ್ಯವಿಲ್ಲದೆ ಇದ್ದರೆ ಸರ್ಕಾರದವರು ಸಾಲವಾಗಿ ಹಣವನ್ನು ಕೊಡುವುದಕ್ಕೆ ಯೋಚನೆ ಮಾಡುತ್ತಾರೆಯೆ ?

ಶ್ರೀ ಟಿ. ಚನ್ನಯ್ಯ.—ಎಲ್ಲ ಪಂಚಾಯಿತಿಯವರು ಹಣವನ್ನು ಸಾಲವಾಗಿ ತೆಗೆದುಕೊಂಡು ಪಾಪನು ಕೊಡಲು ಸಿದ್ಧರಾಗಿದ್ದಾರೆಯೋ ಅಂಥ ಸ್ಥಳಗಳಲ್ಲಿ ಸರ್ಕಾರದವರು ಸಾಲ ಕೊಡುವುದಕ್ಕೆ ಪ್ರಯತ್ನ ಮಾಡುತ್ತಾರೆ.

ಶ್ರೀ ಕೆ. ಲಕ್ಕಪ್ಪ.—ಕೆಲವರು ಸಾಲ ಕೊಡಬೇಕೆಂದು ಅರ್ಜಿ ಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಚನ್ನಯ್ಯ.—ಬಂದಿಲ್ಲ.

Gomal in Jajur village, Challakere Taluk (Proposal to transfer to Forest Department).

Q.—322. **Sri V. MASIYAPPA** (Hiriyur).—

Will the Government be pleased to state :—

(*a*) whether the people of Jajur in Challakere Taluk have grown forest in an area of about 2,000 acres in the Village Gomal;

(*b*) whether the people have requested them to take it over to the Forest Department ;

(*c*) the action taken thereon ?